# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 339**

**ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸುವ ದಿನಾಂಕ : 13.08.2025**

**ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮ ಆಡಳಿತಾಧಿಕಾರಿಗಳ ಸಂಖ್ಯೆ ಎಷ್ಟು; ಇವರಿಗೆ ಹಂಚಿಕೆ ಮಾಡಿರುವ ಕಾರ್ಯಗಳೇನು; | ರಾಜ್ಯದಲ್ಲಿ ಒಟ್ಟು 8736 ಗ್ರಾಮ ಆಡಳಿತ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>ಗ್ರಾಮ ಆಡಳಿತ ಅಧಿಕಾರಿಗಳಿಗೆ ಹಂಚಿಕೆ ಮಾಡಿರುವ ಕಾರ್ಯಗಳ ಕುರಿತು ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ರಾಜ್ಯ ಸರ್ಕಾರದ ಇ-ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದಿರುವುದರಿಂದ ಅನಕ್ಷರಸ್ಥ ಗ್ರಾಮಾಂತರ ಭಾಗದ ಜನರಿಗೆ ಅನುಕೂಲವಾಗುತ್ತಿದೆಯೇ; | ಹೌದು, ಅನುಕೂಲವಾಗುತ್ತಿದೆ. |
| ಇ) | ಗ್ರಾಮಾಡಳಿತವು ಪಾರದರ್ಶಕತೆಯಿಂದ ಕೂಡಿರುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಗ್ರಾಮಾಡಳಿತವು ಪಾರದರ್ಶಕತೆಯಿಂದ ಕೂಡಿರುವಂತೆ ಮಾಡಲು ಸರ್ಕಾರದ ವತಿಯಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಬಹುತೇಕ ಎಲ್ಲಾ ಸೇವೆಗಳನ್ನು ಸಕಾಲ ಯೋಜನೆಯಡಿ ಸೇರಿಸಿ ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ. |

**ಸಂಖ್ಯೆ: ಕಂಇ 151 ಬಿಎಸ್‌ಸಿ 2025**

(ಕೃಷ್ಣಬೈರೇಗೌಡ)
ಕಂದಾಯ ಸಚಿವರು

# ಅನುಬಂಧ

1. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 17, 128,145 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 28,40,62,64,145,147 ಮತ್ತು ಜನನ-ಮರಣ ನೊಂದಣಿ ಅಧಿನಿಯಮ 1969ರ ಕಲಂ 6ರಡಿ ಕರ್ತವ್ಯ ನಿರ್ವಹಿಸತಕ್ಕದ್ದಾಗಿರುತ್ತದೆ.
2. ವಹಿಸಿಕೊಟ್ಟ ಗ್ರಾಮದ ದಫ್ತರ್ ಗಳ ಸಮರ್ಪಕ ನಿರ್ವಹಣೆ.
3. ಸರ್ಕಾರಿ ಬಾಕಿ ವಸೂಲಿಗೆ ಆಧ್ಯತೆ ನೀಡುವುದು.
4. ಸರ್ಕಾರಿ ಜಮೀನು ಅತಿಕ್ರಮಣ ಆಗದಂತೆ ನೋಡಿಕೊಳ್ಳುವುದು ಅತಿಕ್ರಮಣವಾದಲ್ಲಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು.
5. ಜನನ ಮರಣಗಳು ದಾಖಲೆಗಳ ಸಮರ್ಪಕ ನಿರ್ವಹಣೆ ಮಾಡುವುದು.
6. ಕಂದಾಯ ನಿರೀಕ್ಷಕರ ಕಾರ್ಯನಿರ್ವಹಣೆಯಲ್ಲಿ ನೆರವು ನೀಡುವುದು.
7. ಗ್ರಾಮದ ಕುಟುಂಬಗಳ ವಿವರ ಹೊಂದಿರುವುದು ಹಾಗೂ ಸಾರ್ವಜನಿಕರು ಸಂಪರ್ಕಿಸಿದಾಗ ಅವಶ್ಯಕ ಪ್ರಮಾಣ ಪತ್ರ ಪೂರೈಸುವುದು.
8. ಪ.ಜಾ/ಪ.ಪಂಗಡಗಳ ಆಸ್ತಿ ಪರಭಾರ ಆಗದಂತೆ ನೋಡಿಕೊಳ್ಳುವುದು.
9. ಪಡಿತರ ಪೂರೈಕೆ ಸಮರ್ಪಕವಾಗುತ್ತಿರುವ ಬಗ್ಗೆ ಪರಿಶೀಲಿಸುವುದು.
10. ಜನಗಣತಿ/ಮತದಾರ ಪಟ್ಟಿ ತಯಾರಿಕೆ/ಚುನಾವಣೆ/ಪಲ್ಸ್-ಪೋಲಿಯೋ ಕಾರ್ಯದಲ್ಲಿ ಅವಶ್ಯಕ ಮಾಹಿತಿ ಪೂರೈಸುವುದು ಹಾಗೂ ಯಶಸ್ವಿಯಾಗಿ ಜರುಗಲು ಅವಶ್ಯವಿರುವ ಸಹಕಾರ ನೀಡುವುದು.
11. ಮಳೆಯಾದ ಬಗ್ಗೆ ದಿನಂಪ್ರತಿ ಮೇಲಾಧಿಕಾರಿಗಳಿಗೆ ವರದಿಸುವುದು.
12. ಪ್ರಕೃತಿ ವಿಕೋಪ ಜರುಗಿದಾಗ 24 ಘಂಟೆಯೊಳಗೆ ವರದಿ ಸಲ್ಲಿಸಿ ಸಂತ್ರಸ್ಥರಿಗೆ ನೆರವು ನೀಡಲು ಕ್ರಮ ಜರುಗಿಸುವುದು.
13. ಬೇರೆ ಬೇರೆ ಅಧಿಕಾರಿಗಳು ಜರುಗಿಸುವ ಸಮೀಕ್ಷೆಗಳಿಗೆ ಸಂಬಂಧಿಸಿದಂತೆ ಅವಶ್ಯಕ ಮಾಹಿತಿ ನೀಡುವುದು.
14. ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ ಕುರಿತು ಕ್ರಮ ಜರುಗಿಸುವುದು.
15. ಬೆಳೆ ಸಮೀಕ್ಷೆ/ಆನೇವಾರಿಯನ್ನು ನಿಗದಿತ ಅವಧಿಯಲ್ಲಿ ಮಾಡುವುದು.
16. ದಿಟ್ಟಂ/ಹುಜೂರು ಜಮಾಬಂದಿ/ಲೆಕ್ಕ ಪರಿಶೋಧನಾ ಕಾಲಕ್ಕೆ ದರಗಳನ್ನು ಹಾಜರುಪಡಿಸುವುದು.
17. ಯಾವುದೇ ತರಹದ ಸರಕಾರಿ ಹಣ ದುರುಪಯೋಗವಾಗದಂತೆ/ದಾಖಲೆಗಳ ಅನಧಿಕೃತ ತಿದ್ದುಪಡಿಯಾಗದಂತೆ ಕಾರ್ಯ ನಿರ್ವಹಿಸುವುದು.
18. ಈ ಪ್ರಕಾರ ಕಾರ್ಯನಿರ್ವಹಿಸುವಾಗ ಗ್ರಾಮಗಳು ಸಂಬಂಧಿಸಿದ ವಿಷಯದ ಕುರಿತು ಸುತ್ತೋಲೆ ಕಡತ ನಿರ್ವಹಿಸಿ, ಸುತ್ತೋಲೆ/ಅಧಿಕೃತ ಜ್ಞಾಪನ ಪತ್ರದ ಮೂಲಕ ನೀಡಿದ ನಿರ್ದೇಶನಗಳನ್ನು ಪಾಲಿಸುವುದು.
19. ಹಕ್ಕು ದಾಖಲೆ ಹಾಗೂ ಇತರೆ ತಿಳುವಳಿಗೆ ಪತ್ರಗಳನ್ನು ಸಂಬಂಧಿಸಿದವರಿಗೆ ಕರ್ನಾಟಕ ಭೂಕಂದಾಯ ಕಾಯಿದೆ 1964ರ ಕಲಂ 30 ರನ್ವಯ ಸಂಬಂಧಿಸಿದವರಿಗೆ ಜಾರಿ ಮಾಡುವುದು.
20. ಗ್ರಾಮದಲ್ಲಿ ಶಾಂತತೆಗೆ ಭಂಗ ಉಂಟಾಗುವ ಸಂದರ್ಭದಲ್ಲಿ ಅದನ್ನು ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತರುವುದು.

...2

21. ವಿವಿಧ ಕಂದಾಯ ನ್ಯಾಯಾಲಯ ಪ್ರಕರಣಗಳು/ಇತರೆ ಪ್ರಕರಣಗಳಲ್ಲಿ ಸಂಬಂಧಪಟ್ಟವರಿಗೆ ನೋಟೀಸು ಜಾರಿ ಮಾಡುವುದು.
22. ಬೆಳೆ ವಿಮಾ ಯೋಜನೆಯಡಿಯಲ್ಲಿ ಹಿಡುವಳಿದಾರರಿಗೆ ಅಗತ್ಯ ಪ್ರಮಾಣ ಪತ್ರ ನೀಡುವುದು.
23. ಸಾರ್ವಜನಿಕ ಕುಂದುಕೊರತೆ ತಿಳಿದುಕೊಂಡು, ಅವುಗಳ ಪರಿಹಾರಕ್ಕೆ ಅಗತ್ಯ ಕ್ರಮ ಜರುಗಿಸುವುದು.
24. ವಿವಿಧ ಚುನಾವಣೆಗಳಡಿಯಲ್ಲಿ ವಹಿಸಿದ ಕಾರ್ಯಗಳನ್ನು ನಿರ್ವಹಿಸುವುದು. ಗ್ರಾಮಗಳಲ್ಲಿ ಪಡಿತರ ವಿತರಣೆ ಸಮರ್ಪಕವಾಗಿ ನಡೆಯುತ್ತಿರುವ ಬಗ್ಗೆ ನಿಗಾ ವಹಿಸುವುದು.
25. ಗ್ರಾಮ ಮಟ್ಟದಲ್ಲಿ ಮೇಲಾಧಿಕಾರಿಗಳಿಂದ ಸ್ಥಾನಿಕ ಚೌಕಶಿಗಾಗಿ ಬಂದ ಪ್ರಕರಣಗಳಲ್ಲಿ ಅಗತ್ಯ ಮಾಹಿತಿ ನೀಡುವುದು ಮತ್ತು ಸಹಕರಿಸುವುದು.
26. ಗ್ರಾಮ ಮಟ್ಟದಲ್ಲಿ ಮೇಲಾಧಿಕಾರಿಗಳು/ಗಣ್ಯ ವ್ಯಕ್ತಿಗಳು ಬಂದಾಗ ಶಿಷ್ಟಾಚಾರ ವ್ಯವಸ್ಥೆ ಮಾಡುವುದು.
27. ವಿವಿಧ ಗಣತಿ ಕಾರ್ಯಗಳಲ್ಲಿ ಸಹಕರಿಸುವುದು/ ಮಾಹಿತಿ ಒದಗಿಸುವುದು.
28. ನಿರ್ದಿಷ್ಟ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ಸರ್ಕಾರಿ ಜಮೀನು, ಕೆರೆ ವಗೈರೆ ಬೇರೆ ಉದ್ದೇಶಕ್ಕಾಗಿ ಉಪಯೋಗವಾಗದಂತೆ ನೋಡಿಕೊಳ್ಳುವುದು.
29. ವಿವಿಧ ರಾಷ್ಟ್ರೀಯ/ರಾಜ್ಯ ಯೋಜನೆಗಳ ಅಡಿಯಲ್ಲಿ ನೀಡಲಾದ ಕಾರ್ಯನಿರ್ವಹಿಸುವುದು.
30. ಸಾರ್ವಜನಿಕರೊಂದಿಗೆ ಒಳ್ಳೆಯ ಸಂಪರ್ಕ ಹೊಂದಿರುವುದು.
31. ಸರ್ಕಾರದ ಯಾವುದೇ ಹೊಸ ಯೋಜನೆಗಳನ್ನು ಜಾರಿಗೆ ತರುವಾಗ ಅವರ ಅನುಷ್ಠಾನದ ಜವಾಬ್ದಾರಿಯನ್ನು ಮೊದಲು ತೆಗೆದುಕೊಂಡು ಅವುಗಳನ್ನು ಗ್ರಾಮ ಮಟ್ಟದಲ್ಲಿ ಸಾರ್ವಜನಿಕರಿಗೆ ತಲುಪಿಸಲು ಸಹಕಾರ ನೀಡುವುದು ಹಾಗೂ ಯೋಜನೆಗಳು ಕಾರ್ಯಗತವಾಗುವಂತೆ ನೋಡಿಕೊಳ್ಳುವುದು.
32. ಭೂಸುಧಾರಣೆ-ಭೂಸುಧಾರಣೆ ಕಾಯ್ದೆಯಂತೆ ಕಲಂ 79ಎ ಹಾಗೂ 79ಬಿ ಪ್ರಕರಣಗಳು ಉಲ್ಲಂಘನೆಯಾದಂಥ ಪ್ರಕರಣಗಳನ್ನು ಪತ್ತೆ ಹಚ್ಚುವುದು. ಅನುಚ್ಛೇದ 81ಎ ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಹಚ್ಚುವುದು. ಕೃಷಿ ಮಾಡದೇ ಪಾಳು ಬಿದ್ದ ಜಮೀನುಗಳ ವಿವರಣೆಗಳ ಕೆಲಸ.
33. ಜೀತದಾಳುಗಳ ಪುನರ್ವಸತಿ, ಇನಾಂ ರದ್ದತಿ, ಸಾಲ ಪರಿಹಾರ ಕಾಯ್ದೆ.
34. ದುರ್ಬಲ ವರ್ಗದವರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಆಗಾಗ್ಗೆ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳ ಬಗ್ಗೆ ಸಂಬಂಧಿಸಿದ ಕಾರ್ಯಾಚರಣೆ.
35. ಸರ್ಕಾರವು ಸೂಚಿಸುವ ಇನ್ನಿತರೆ ಯೋಜನೆ / ಕಾರ್ಯಕ್ರಮಗಳಿಗೆ ಸಂಬಂಧಿಸಿದ ಹಾಗೂ ಇತರೆ ಕೆಲಸ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

*********